ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ
ದಿನಾಂಕ : DATE 27/5/20

# ಸಂಸದರ ನಿಧಿ ಬಳಕೆ: ಪ್ರತಾಪ್ ಸಿಂಹ ಫಸ್ಟ್

## ಸುಮಲತಾ ನಂ.2 | ಪ್ರತಾಪ್ ಸಿಂಹ ಶೇ.49ರಷ್ಟು, ಸುಮಲತಾರಿಂದ ಶೇ.26ರಷ್ಟು ಸಂಸದರ ನಿಧಿ ಬಳಕೆ

## ರಾಜ್ಯದ 28 ಕ್ಷೇತ್ರಗಳಿಗೆ ಈವರೆಗೆ 75 ಕೋಟಿ ರು. ಬಿಡುಗಡೆ | ಈ ಪೈಕಿ ಸಂಸದರಿಂದ 23 ಕೋಟಿ ಹಂಚಿಕೆ

• **ಅಂಶಿ ಪ್ರಸನ್ನಕುಮಾರ್**
**ಕನ್ನಡಪ್ರಭ ವಾರ್ತೆ** ಮೈಸೂರು

ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಎರಡನೇ ಅವಧಿಗೆ ಅಧಿಕಾರ ವಹಿಸಿ ಮೇ 30ಕ್ಕೆ ಒಂದು ವರ್ಷ ತುಂಬುವ ಈ ಸಂದರ್ಭದಲ್ಲಿ ಸಂಸದರ ಕ್ಷೇತ್ರಾಭಿವೃದ್ಧಿ ನಿಧಿ ಬಳಕೆಯ ವಿಚಾರದಲ್ಲಿ ರಾಜ್ಯದ 28 ಸಂಸದರ ಪೈಕಿ ಮೈಸೂರು-ಕೊಡಗು ಕ್ಷೇತ್ರದ ಪ್ರತಾಪ್ ಸಿಂಹ ಮುಂಚೂಣಿಯಲ್ಲಿ ನಿಂತಿದ್ದಾರೆ. ನಂತರದ ಸ್ಥಾನದಲ್ಲಿ ಮಂಡ್ಯ ಸಂಸದೆ ಸುಮಲತಾ ಅಂಬರೀಷ್ ಇದ್ದಾರೆ.

ಇವರಿಬ್ಬರಿಗೂ ತಲಾ ₹5 ಕೋಟಿ ಬಿಡುಗಡೆಯಾಗಿದ್ದು ಉಳಿದವರಿಗೆ ತಲಾ ₹2.5 ಕೋಟಿ ಬಿಡುಗಡೆಯಾಗಿದೆ. ಮೊದಲ ಕಂತಲ್ಲಿ ಬಿಡುಗಡೆಯಾದ ಹಣಕ್ಕೆ ಬಳಕೆ ಪ್ರಮಾಣಪತ್ರ(ಯುಸಿ) ನೀಡಿದ ನಂತರ 2ನೇ ಕಂತು ಬಿಡುಗಡೆ ಮಾಡಲಾಗಿಗುತ್ತದೆ. ಪ್ರತಾಪ್ ಸಿಂಹ







ಒಟ್ಟಾರೆ ತಮಗೆ ಬಿಡುಗಡೆಯಾದ ಹಣದಲ್ಲಿ ಶೇ.49ರಷ್ಟು, ಸುಮಲತಾ ಶೇ.26ರಷ್ಟು ಬಳಕೆ ಮಾಡಿದ್ದಾರೆ. ಸುಮಲತಾ ಬಿಡುಗಡೆಯಾಗಿರುವ ₹5 ಕೋಟಿ ಅನುದಾನದಲ್ಲಿ ₹4.90 ಕೋಟಿ ಹಂಚಿಕೆ ಮಾಡಿದ್ದಾರೆ. ಹಂಚಿಕೆಯಲ್ಲಿ ಇವರು ಪ್ರತಾಪ್ ಸಿಂಹರಿಗಿಂತ ಮುಂದಿದ್ದಾರೆ. ಆದರೆ ವೆಚ್ಚದಲ್ಲಿ ಹಿಂದುಳಿದಿದ್ದಾರೆ.

ಮೊದಲ ಕಂತು ₹2.50 ಕೋಟಿ ಮಾತ್ರ ಬಿಡುಗಡೆಯಾಗಿರುವವರ ಪೈಕಿ ಹಾಸನದ ಪ್ರಜ್ವಲ್ ರೇವಣ್ಣ ₹2.45 ಕೋಟಿ ಹಂಚಿಕೆ ಹಾಗೂ ₹2.07 ಕೋಟಿ ವೆಚ್ಚ ಮಾಡಿ ಮೊದಲ ಸ್ಥಾನದಲ್ಲಿದ್ದಾರೆ. ₹1.88 ಕೋಟಿ ವೆಚ್ಚ ಮಾಡಿರುವ ದಕ್ಷಿಣ ಕನ್ನಡದ ನಳಿನ್ ಕುಮಾರ್ ಕಟೀಲ್ ದ್ವಿತೀಯ ಸ್ಥಾನದಲ್ಲಿದ್ದಾರೆ. ಕೇಂದ್ರ ಸಚಿವರೂ ಆಗಿರುವ ಧಾರವಾಡ ಕ್ಷೇತ್ರದ ಪ್ರಹ್ಲಾದ ಜೋಶಿ ಬಡ್ಡಿಸಹಿತ ತಮ್ಮ ಅನುದಾನದಲ್ಲಿದ್ದ ₹2.68 ಕೋಟಿ ಹಂಚಿಕೆ ಮಾಡಿದ್ದು, ಶೇ.18 ರಷ್ಟು ಮಾತ್ರ ಬಳಕೆಯಾಗಿದೆ. ಉಡುಪಿ-ಚಿಕ್ಕಮಗಳೂರಿನ ಸಂಸದೆ ಶೋಭಾ ಕರಂದ್ಲಾಜೆ ₹2.50 ಕೋಟಿ ಪೈಕಿ ₹2.32 ಕೋಟಿ ಅನುದಾನ ಹಂಚಿಕೆ ಮಾಡಿದ್ದರೂ ವೆಚ್ಚವಾಗಿರುವುದು ₹5 ಲಕ್ಷ ಮಾತ್ರ. ಬೆಂಗಳೂರು









ಮೊದಲ ಕಂತಿನ ನಿಧಿಯಲ್ಲಿ ಪ್ರಜ್ವಲ್ ರೇವಣ್ಣ ಪ್ರಥಮ, ನಳಿನ್ ಕುಮಾರ್ ಕಟೀಲ್ ದ್ವಿತೀಯ. ಹೆಚ್ಚು ಅನುದಾನ ಹಂಚಿಕೆ ಮಾಡಿರುವ ಪ್ರಹ್ಲಾದ್ ಜೋಶಿ, ಶೋಭಾ ಕರಂದ್ಲಾಜೆ.

ಗ್ರಾಮಾಂತರದ ಡಿ.ಕೆ. ಸುರೇಶ್ ₹5 ಲಕ್ಷ ಹಂಚಿಕೆ ಮಾಡಿದ್ದಾರೆ. ಉಳಿದೆಲ್ಲಾ ಸಂಸದರು ತಮ್ಮ ಮೊದಲ ಕಂತಿನ ಅನುದಾನವನ್ನು ಹಂಚಿಕೆ ಮಾಡಬೇಕಾಗಿದೆ.

ಒಟ್ಟಾರೆ ರಾಜ್ಯದ 28 ಕ್ಷೇತ್ರಗಳಿಗೆ ತಲಾ ₹5 ಕೋಟಿಗಳಂತೆ ಸಂಸದರ ಕ್ಷೇತ್ರಾಭಿವೃದ್ಧಿ ನಿಧಿಯಲ್ಲಿ ₹140 ಕೋಟಿ ಬಿಡುಗಡೆಯಾಗಬೇಕು. ಈವರೆಗೆ ₹75 ಕೋಟಿ ಮಾತ್ರ ಬಿಡುಗಡೆಯಾಗಿದೆ. ಈ ಪೈಕಿ ಸಂಸದರು ₹23.53 ಕೋಟಿ ಹಂಚಿಕೆ ಮಾಡಿದ್ದು, ₹12.78 ಕೋಟಿ ಮಂಜೂರಾಗಿದೆ. ₹8.35 ಕೋಟಿ ವೆಚ್ಚವಾಗಿದೆ. ಬಳಕೆ ಪ್ರಮಾಣ ಶೇ.11.13 ಮಾತ್ರ.